

'ಅದರಿಂದ ನಿನಗೇನು ತೊಂದರೆಯಾಗ್ತಿರೋದು? ನೀನು ಅಲ್ಲೂ ಒಂದು ಕಡ್ಡಿ ತೆಗೆದು ಈ ಕಡೆಯಿಂದ ಆ ಕಡೆಗೆ ಇಡ್ತಿಲ್ಲ. ನಿನ್ನನ್ನು ನೋಡಿ ಅವರಿಗೂ ಇರಿಟೇಟ್ ಆಗಬಹುದಲ್ಲವಾ?'

'ಆಗಬಹುದು. ಒಟ್ಟಿನಲ್ಲಿ ನನಗೆ ನನ್ನ ಮನಸ್ಸಿಗೆ ಬಂದಂತೆ ಇರಲು ಆಗ್ತಿಲ್ಲ'.

'ನೀನೊಂದು ತರಹ ವಿಚಿತ್ರ ಕಣೆ.'

'ಹೌದಮ್ಮ. ನಾನಿರೋದೇ ಹೀಗೆ. ಯಾರ್‍ಯಾರಿಗೋಸ್ಕರಾನೋ ನಾನು ಬದಲಾಗಕ್ಕೆ ಆಗಲ್ಲ'.

'ಪುಷ್ಪ, ಅವರತ್ತೆ ಯಾತಕ್ಕೆ ಬರಹೇಳಿದ್ದಾರೋ ಏನೋ? ನೀನು ಏನೇನೋ ಕಲ್ಪನೆ ಮಾಡಿಕೊಂಡು ತಲೆ ಕೆಡಿಸಿಕೊಳ್ಳಬೇಡ'.

'ನೋಡು ಬಕುಳಾ. ಅಜಯ್ ನೀನು ಇಷ್ಟಪಟ್ಟ ಹುಡುಗ. ಅವನೂ ಅವರಪ್ಪ ಅಮ್ಮಂಗೆ ಒಬ್ಬನೇ ಮಗ. ನೀನು ಬೇರೆ ಮನೆ ಮಾಡುವ ಯೋಚನೆ ಮಾಡಿದರೆ ನಾವು ಖಂಡಿತಾ ಸಪೋರ್ಟ್ ಮಾಡಲ್ಲ'.

'ನಾನೇನು ಓಡಿಹೋಗಿ ಮದುವೆ ಮಾಡಿಕೊಂಡಿದ್ದೀನಾ? ನೀವೂ ಅಜಯ್‌ನ ಒಪ್ಪಿದ್ರಿ ತಾನೆ? ಜಾತಿ, ಕುಲ, ಓದು, ಕೆಲಸ, ಅಂತಸ್ತು ಎಲ್ಲಾ ನೋಡೇತಾನೇ ಮದುವೆ ಮಾಡಿದ್ದು?' ಬಕುಳಾ ಧ್ವನಿ ಏರಿಸಿದಳು.

'ಇಬ್ಬರೂ ಬಾಯ್ಮುಚ್ಚೀರಾ?' ರಘೋತ್ತಮ್ ಒಂದು ಕೂಗು ಹಾಕಿದಾಗ ಇಬ್ಬರೂ ತೆಪ್ಪಗಾದರು.

* * *

ರಾತ್ರಿ ಪಲ್ಯಕ್ಕೆ ತರಕಾರಿ ಹೆಚ್ಚುತ್ತಿದ್ದರೂ ಪುಷ್ಪನ ಮನಸ್ಸು ಮಗಳ ಬಗ್ಗೆಯೇ ಯೋಚಿಸುತ್ತಿತ್ತು. ರಘೋತ್ತಮ್ ಎಲ್.ಐ.ಸಿ. ಯಲ್ಲಿ ಡೆವಲಪ್‌ಮೆಂಟ್ ಆಫೀಸರ್ ಆಗಿ ಕಾರ್ಯನಿರ್ವಹಿಸಿ ನಿವೃತ್ತಿಹೊಂದಿದ್ದರು. ನಿವೃತ್ತಿಯ ನಂತರ ಬೆಂಗಳೂರಿನ ಸಮೀಪದ ರಾಮೇನಹಳ್ಳಿಯಲ್ಲಿ ನೆಲೆಸಿದ್ದರು. ತಂದೆಯ ಕಾಲದ ಆಸ್ತಿ ನೋಡಿಕೊಳ್ಳುತ್ತಾ ಕೃಷಿಕರಾಗಿದ್ದರು. ಅವರ ಒಬ್ಬಳೇ ಮಗಳು ಬಕುಳ. ಇಂಜಿನಿಯರಿಂಗ್ ಪದವೀಧರೆ. ಬೆಂಗಳೂರಿನಲ್ಲಿ ಒಂದು ಒಳ್ಳೆಯ ಕಂಪನಿಯಲ್ಲಿ ಕೆಲಸ ಮಾಡುತ್ತಾ ಪಿ.ಜಿ.ಯಲ್ಲಿದ್ದಳು. ಅವಳಿಗೆ ಕನ್ನಡಸಂಘದ ಕಾರ್ಯಕ್ರಮವೊಂದರಲ್ಲಿ ಅಜಯ್ ಪರಿಚಯವಾಗಿದ್ದ. ಪರಿಚಯ ಪ್ರೇಮವಾಗಿತ್ತು. ಹಿರಿಯರು ಒಪ್ಪಿ ಮದುವೆಮಾಡಿದ್ದರು. ಮದುವೆ ಗೊತ್ತಾಗುತ್ತಿದ್ದಂತೆ, 'ರಜ ಸಿಗುವುದು ಕಷ್ಟ. ಆರಾಮವಾಗಿರಲು ಸಾಧ್ಯವಿಲ್ಲ' ಎಂಬ ನೆಪಹೇಳಿ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಳು ಬಕುಳ. ಪುಷ್ಪ ಆಕ್ಷೇಪಿಸಿದಾಗ, ಬೇರೆ ಕೆಲಸ ನೋಡಿಕೊಂಡರಾಯಿತು ಬಿಡಮ್ಮ ಎಂದಿದ್ದಳು.

ಮಗಳು ತುಂಬಾ ಮೊಂಡು ಎಂದು ಪುಷ್ಪಾಗೆ ಗೊತ್ತಿತ್ತು. ಮದುವೆಯಾದ ಮೇಲೆ ಬದಲಾಗುತ್ತಾಳೆಂದು ಅವರು ನಂಬಿದ್ದರು. ಆದರೆ ಆ ತರಹ ಸೂಚನೆಗಳು ಯಾವುದೂ ಕಾಣದಿದ್ದಾಗ ಅವರಿಗೆ ತುಂಬಾ ಬೇಸರವಾಗಿತ್ತು. ಬಕುಳಾಳ ಅತ್ತೆ ಪದ್ಮಮ್ಮನ ನೆನಪಾದಾಗ, 'ಅವರ ಸುಖೀಸಂಸಾರ ಒಡೆಯಲು ನನ್ನ ಮಗಳೇ ಕಾರಣಳಾಗುತ್ತಾಳಲ್ಲ...' ಎಂದು ದುಃಖವಾಯಿತು. ಬೀಗರ ಮನೆಗೆ ತೆಗೆದುಕೊಂಡು ಹೋಗಲು ಸಿಹಿ–ಖಾರ ತಿಂಡಿಗಳನ್ನು ಮಾಡಿಸಬೇಕಿದ್ದುದರಿಂದ ಮಂಗಳಮ್ಮನಿಗೆ ಫೋನ್ ಮಾಡಿದರು.

ರಾತ್ರಿ ಚಪಾತಿ ತಿನ್ನುವಾಗ ಪುಷ್ಪ ಮಗಳಿಗೆ ಹೇಳಿದರು. 'ದಿನಾರಾತ್ರಿ ಅಜಯ್ ನಿನಗೆ ಫೋನ್ ಮಾಡ್ತಾರೇಂತ ನನಗೆ ಗೊತ್ತು. ನೀನು ಗುರುವಾರ ಬರ್ತೀವಿ ಅಂತ ಮಾತ್ರ ಹೇಳು. ಬೇರೆ ಮನೆ ವಿಚಾರ ಮಾತಾಡಬೇಡ'.

'ಹೌದಮ್ಮ ಬಕುಳ. ನಿಮ್ಮತ್ತೆ ಅವರಾಗವರೇ ಹೇಳುವವರೆಗೂ ನೀನು ಏನೂ ಮಾತಾಡಕೂಡದು. ನೀನು ಅಜಯ್ ಹತ್ತಿರ ಮಾತಾಡಿ ರಂಪ–ರಾಮಾಯಣ ಮಾಡಿದರೆ ನಾನು ಸುಮ್ಮನಿರಲ್ಲ. ಅಜಯ್‌ಗೆ ಗುರುವಾರದವರೆಗೂ ಏನೂ ಹೇಳದೆ ಸುಮ್ಮನಿರಬೇಕು' ರಘೋತ್ತಮ್ ಹೇಳಿದರು.

'ಆಗಲೀಪ್ಪ' ಎಂದಳು ಬಕುಳಾ.

ಬಕುಳಾಗೆ ತಂದೆ–ತಾಯಿ ಇಬ್ಬರ ಸ್ವಭಾವವೂ ಗೊತ್ತಿತ್ತು. ಇಬ್ಬರೂ ಶಾಂತ ವ್ಯಕ್ತಿಗಳೇ. ಆದರೆ ತಂದೆ ಕೋಪಗೊಂಡರೆ ಮಾತ್ರ ದೂರ್ವಾಸ ಮುನಿಯೇ. ಇಬ್ಬರೂ ತಮ್ಮ ಮಗಳನ್ನು ಬೇರೆಬೇರೆ ರೀತಿ ಶಿಕ್ಷಿಸುತ್ತಿದ್ದರು. ರಘೋತ್ತಮ್ ಮಗಳ ಜೊತೆ ಮಾತುಬಿಟ್ಟರೆ, ಬಕುಳಾ 'ತಪ್ಪಾಯಿತು' ಎಂದು ಕೇಳುವವರೆಗೂ ಪುಷ್ಪ ಉಪವಾಸ ಸತ್ಯಾಗ್ರಹ ಆರಂಭಿಸುತ್ತಿದ್ದಳು.

ಬಕುಳಾ ಹೆಚ್ಚು ಮಾತನಾಡಲಿಲ್ಲ. ಅವಳು ಯಾವ ವಿಷಯವನ್ನೂ ಸೀರಿಯಸ್ ಆಗಿ ತೆಗೆದುಕೊಳ್ಳುತ್ತಿರಲಿಲ್ಲ. ಯಾಕೋ ಈ ವಿಚಾರ ತಲೆನೋವಾಗುತ್ತದೆ ಎನ್ನಿಸಿತು. ಗುರುವಾರ ಬೆಂಗಳೂರಿಗೆ ಹೋದರೂ ನಾಲ್ಕು ದಿನ ಮನೆಯಲ್ಲೇ ಇರಬೇಕಾಗಿತ್ತು. ಅವಳು ಹೊಸ ಕೆಲಸಕ್ಕೆ ಸೋಮವಾರದಿಂದ ಹೋಗಬೇಕಾಗಿತ್ತು.

ಪುಷ್ಪಳ ಮನಸ್ಸು ಸರಿಯಾಗಿರಲಿಲ್ಲವಾದ್ದರಿಂದ ಹೆಚ್ಚು ತಿಂಡಿಗಳನ್ನು ಮಾಡಿಸಲಿಲ್ಲ. ಕೋಡುಬಳೆ,